# ಕೈಗಳ ಕಸಿ ಬದುಕಲ್ಲಿ ಖುಷಿ



**ಮೆದುಳು ನಿಷ್ಕ್ರಿಯಗೊಂಡ ಕೇರಳ ಮೂಲದ ವ್ಯಕ್ತಿಯ ಕೈಗಳನ್ನು ಅಪಘಾತದಿಂದ ಎರಡೂ ಕೈಗಳನ್ನು ಕಳೆದುಕೊಂಡ ಬಳ್ಳಾರಿ ಯುವಕನಿಗೆ ಶಸ್ತ್ರಚಿಕಿತ್ಸೆ ಮೂಲಕ ಈಚೆಗೆ ಕಸಿ ಮಾಡಲಾಗಿದೆ. ವೈದ್ಯಲೋಕದಲ್ಲಿ ಎರಡೂ ಕೈಗಳನ್ನು ಕಸಿ ಮಾಡಿದ ಈ ಪ್ರಕರಣ ಅಪರೂಪದ ದಾಖಲೆಯಾಗಿದೆ.**

■ ಯು. ಅನಂತ್

ಮೆದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಕಿಡ್ನಿ, ಕಣ್ಣು, ಲಿವರ್, ಹೃದಯ ಮುಂತಾದ ಅಂಗಗಳನ್ನು ಅವಶ್ಯಕತೆ ಇರುವವರಿಗೆ ಕಸಿ ಮಾಡುವುದು ವೈದ್ಯಲೋಕದಲ್ಲಿ ಸಾಮಾನ್ಯವಾಗಿ ಬಿಟ್ಟಿದೆ. ಆದರೆ ಕೈಗಳ ಕಸಿ ಮಾಡುವುದು, ಅದರಲ್ಲೂ ಎರಡೂ ಕೈಗಳನ್ನು ಕಸಿ ಮಾಡಿ ಜೋಡಣೆ ಮಾಡುವುದು ಅಪರೂಪವೇ. ಕಳೆದ ಕೆಲ ವರ್ಷಗಳಿಂದ ದಾನಿಗಳಿಂದ ಪಡೆದ ಕೈಗಳನ್ನು ಕಸಿ ಮಾಡುವ ಪ್ರಕರಣಗಳು ಅಲ್ಲೊಂದು ಇಲ್ಲೊಂದು ವರದಿಯಾಗುತ್ತಲೇ ಇದ್ದರೂ ಕಣ್ಣು, ಕಿಡ್ನಿಯಷ್ಟು ಸಲೀಸಾಗಿ ಕೈಗಳ ಕಸಿ ನಡೆಯುವುದಿಲ್ಲ.

ಇದು ಮೊನ್ನೆ ಮೊನ್ನೆ ನಡೆದ ಕೈಗಳ ಕಸಿ ಪ್ರಕರಣ. ಬಳ್ಳಾರಿ ಜಿಲ್ಲೆಯ ಅಕ್ಕಿ ಮಿಲ್‌ನಲ್ಲಿ ಬಾಯ್ಲರ್ ನಿರ್ವಹಣೆ ಮಾಡುತ್ತಿದ್ದ 34 ವರ್ಷದ ಬಸವಣ್ಣ ಗೌಡ, ಹತ್ತು ವರ್ಷದ ಹಿಂದೆ ವಿದ್ಯುತ್ ಶಾಕ್ ತಗುಲಿ ಎರಡೂ ಕೈಗಳನ್ನು ಕಳೆದುಕೊಂಡಿದ್ದರು. ಕೈಗಳೇ ಇಲ್ಲದೆ ಕೆಲಸ ನಿರ್ವಹಿಸುವುದು, ಜೀವನ ಸಾಗಿಸುವುದೇ ದುಸ್ತರವಾಗಿತ್ತು.

ಕೇರಳದ ಕೊಟ್ಟಾಯಂ ಮೂಲದ 25 ವರ್ಷದ ಯುವಕ ನೇವಿಸ್ ಸಾಜನ್ ಮ್ಯಾಥ್ಯೂ ತನ್ನ ಎರಡೂ ಕೈಗಳನ್ನು ದಾನ ಮಾಡಿದ. ಆ ಮೂಲಕ ಬಸವಣ್ಣನ ಬಾಳಿನಲ್ಲಿ ಬೆಳಕಾಗಿ ಬಂದ, ಜೀವನ ಬೆಳಗಿಸಿದ. ದುರದೃಷ್ಟವಶಾತ್ ನೇವಿಸ್ ಸಾಜನ್ ಮ್ಯಾಥ್ಯೂ ಅನಾರೋಗ್ಯದಿಂದ ಮೆದುಳು ನಿಷ್ಕ್ರಿಯಗೊಂಡಿತ್ತು. ಈತನ ಎರಡೂ ಕೈಗಳನ್ನು ಬಸವಣ್ಣ ಗೌಡನಿಗೆ ಕೊಚ್ಚಿಯ ಅಮೃತಾ ಆಸ್ಪತ್ರೆಯಲ್ಲಿ ಕಸಿ ಮಾಡಲಾಯಿತು. ಇದಕ್ಕಾಗಿ ಕೊಚ್ಚಿಯ ವೈದ್ಯರು ಸತತ 14 ಗಂಟೆಗಳ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ಕೈಗಳ ದಾನಿ ನೇವಿಸ್, ಫ್ರಾನ್ಸ್‌ನಲ್ಲಿ ಅಕೌಂಟಿಂಗ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದ. ರಜೆಯ ನಿಮಿತ್ತ ನೇವಿಸ್ ಸಾಜನ್ ಫ್ರಾನ್ಸ್‌ನಿಂದ ತವರಿಗೆ ಬಂದಿದ್ದಾಗ ಅನಾರೋಗ್ಯಕ್ಕೆ ತುತ್ತಾದ. ಕಾಯಿಲೆ ಉಲ್ಬಣಗೊಂಡು ಕೊಚ್ಚಿಯ ಆಸ್ಪತ್ರೆಯಲ್ಲಿ 2021 ಸೆಪ್ಟೆಂಬರ್ 25ರಂದು ಈತನ ಮೆದುಳು ನಿಷ್ಕ್ರಿಯಗೊಂಡಿತು. ಈತನ ಹೆತ್ತವರಾದ ಸಾಜನ್ ಮ್ಯಾಥ್ಯೂ ಮತ್ತು ಶೆರಿನ್ ಅವರು ಮಗನ ಎರಡು ಕೈಗಳೂ ಸೇರಿದಂತೆ ವಿವಿಧ ಅಂಗಾಂಗಗಳನ್ನು ದಾನ ಮಾಡಲು ನಿರ್ಧರಿಸಿದರು. ಇದು ಬಹುಕಾಲದಿಂದ ಕೈಗಳ ಕಸಿಗೆ ಕಾದಿದ್ದ ಬಸವಣ್ಣ ಅವರಿಗೆ ವರದಾನವಾಗಿ ಪರಿಣಮಿಸಿತು.

## ಘಟನೆ ನಡೆದದ್ದು ಹೇಗೆ?

ಅದು 2011ರ ಜುಲೈ ತಿಂಗಳು. ಅಕ್ಕಿ ಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಬಸವಣ್ಣ ಅವರಿಗೆ ಹೈಟೆನ್ಷನ್ ವಿದ್ಯುತ್‌ನಿಂದಾಗಿ ತೀವ್ರ ಸುಟ್ಟಗಾಯಗಳಾಗಿತ್ತು. ಅವರ ಎರಡೂ ಕೈಗಳನ್ನು ಕಳೆದುಕೊಳ್ಳಬೇಕಾಯಿತು. ಈ ಅವಘಡದ ನಂತರ ಬಸವಣ್ಣನನ್ನು ಬೆಂಗಳೂರಿನ ಆಸ್ಪತ್ರೆಗೆ ಕರೆತರಲಾಯಿತು, ತಪಾಸಣೆ ನಡೆಸಿದ ವೈದ್ಯರು ಮೊಣಕೈ ಕೆಳಗೆ ಎರಡೂ ಕೈಗಳನ್ನು ಕತ್ತರಿಸಿ ತೆಗೆದಿದ್ದರು. ಹಲವು ವರ್ಷಗಳ ನಂತರ ಅವರು ಕೇರಳದ ಕೊಚ್ಚಿಯ ಅಮೃತಾ ಆಸ್ಪತ್ರೆಯ ಕೈ ಕಸಿ ವಿಭಾಗಕ್ಕೆ ದಾನಿಗಳಿಂದ ಕೈ ಪಡೆಯಲು ಹೆಸರು ನೋಂದಾಯಿಸಿ ಕೊಂಡಿದ್ದರು.

ನೇವಿಸ್ ಸಜನ್ ಮ್ಯಾಥ್ಯೂ ಅವರಿಂದ ಕೈಗಳನ್ನು ದಾನವಾಗಿ ಪಡೆದ ಬಳಿಕ ಕೊಚ್ಚಿಯ ಅಮೃತಾ ಆಸ್ಪತ್ರೆಯ ಶಸ್ತ್ರಚಿಕಿತ್ಸಕರ ತಂಡವು ಈ ವರ್ಷದ ಫೆಬ್ರುವರಿಯ ಮೊದಲ ವಾರದಲ್ಲಿ ಬಸವಣ್ಣನವರಿಗೆ ಶಸ್ತ್ರಚಿಕಿತ್ಸೆ ಮಾಡಿ ಕೈಗಳನ್ನು ಯಶಸ್ವಿಯಾಗಿ ಜೋಡಿಸಿದೆ. ಇದು ಬಹಳ ಅಪರೂಪದ ಸರ್ಜರಿ ಎನಿಸಿದೆ.

‘ರೋಗಿಯ ತೋಳಿನ ಮೂರನೇ ಭಾಗದಲ್ಲಿ ಕಸಿ ಮಾಡಲಾಗಿದೆ. ಇದೊಂದು ಅತ್ಯಂತ ಸಂಕೀರ್ಣ ಶಸ್ತ್ರಚಿಕಿತ್ಸೆಯಾದ್ದು, ಈ ಹಂತದ ಕಸಿ ಚಿಕಿತ್ಸೆಗಳಲ್ಲಿ ತೋಳಿನ ಸ್ನಾಯುಗಳ ನೈಸರ್ಗಿಕ ಉದ್ದದ ಮೂರನೇ ಒಂದು ಭಾಗ ಮಾತ್ರ ರೋಗಿಯಲ್ಲಿ ಇರುತ್ತದೆ. ಇದಕ್ಕಾಗಿ ದಾನಿಯ ಅಂಗಗಳಿಂದ ಉಳಿದ ಸ್ನಾಯುಗಳನ್ನು ಪಡೆದು, ಅವುಗಳನ್ನು ರೋಗಿಯ ಸ್ನಾಯುಗಳ ಮೇಲೆ ಅಳವಡಿಸಬೇಕಿತ್ತು. ಇದರೊಂದಿಗೆ ಎಲುಬುಗಳನ್ನು ಜೋಡಿಸುವುದೂ ಸವಾಲಿನದ್ದಾಗಿತ್ತು. ಇಲ್ಲಿ ಪ್ಲೇಟ್‌ಗಳನ್ನು ಅಳವಡಿಸಿ ಅವುಗಳು ಹಿಂದಿನ ಎಲುಬುಗಳ ರೀತಿಯೇ



ವಿದ್ಯುತ್ ಶಾಕ್‌ನಿಂದ ಕೈಕಳೆದುಕೊಂಡ ಬಸವಣ್ಣ